ಪ್ರಯಾಣಿಸುತ್ತಿದ್ದ ಕ್ಲೀನರ್ ಕುಮಾರ್ ಸ್ಥಳದಲ್ಲೆ ಮೃತಪಟ್ಟರು.

ತಿಮ್ಮಪ್ಪ, ಕೇಂದ್ರ ಆರೋಗ್ಯ ಖಾತೆ ಕಾರ್ಯದರ್ಶಿ ಹೋತ, ವಿಧಾನ ಪರಿಷತ್ ಸದಸ್ಯ ಶಶಿಲ್ ನಮೋಶಿ, ಜಿಲ್ಲಾಧಿಕಾರಿ ಜಯರಾಂ ಮತ್ತಿತರರು ಉಪಸ್ಥಿತರಿದ್ದರು.

# ಹುಟ್ಟುಕುರುಡ ಹಸುಳೆಗೆ ದೃಷ್ಟಿ ಭಾಗ್ಯ

ಬೆಂಗಳೂರು, ಆ. 9: ಕುರುಡ ದಂಪತಿಗಳ ಹುಟ್ಟುಕುರುಡ ಮಗುವೊಂದಕ್ಕೆ ನಗರದ ನಾರಾಯಣ ನೇತ್ರಾಲಯ ವೈದ್ಯರು ಯಶಸ್ವಿ ನೇತ್ರ ಶಸ್ತ್ರಚಿಕಿತ್ಸೆ ನಡೆಸಿ ದೃಷ್ಟಿಭಾಗ್ಯ ಕರುಣಿಸಿದೆ.

ಒಂದು ವರ್ಷ ವಯಸ್ಸಿನ ಧ್ರುವ ಕುಮಾರ್ ಈ ಅದೃಷ್ಟವಂತ. ಆತನ ತಂದೆ ಪಾವಗಡದ ಆಂಜನೇಯ ರೆಡ್ಡಿಗೆ ಕಣ್ಣುಗಳು ಪೂರ್ಣ ಕಾಣಿಸುವುದಿಲ್ಲ. ಸಂಗೀತ ಕಲಿತಿದ್ದಾನೆ. ತಾಯಿ ರೇಣುಕಾಗೆ ತೀರಾ ಹತ್ತಿರದ್ದು ಮಾತ್ರ ಮಸುಕು ಮಸುಕಾಗಿ ಕಾಣಿಸುತ್ತದೆ. ಇಬ್ಬರಿಗೂ ಉದ್ಯೋಗ ಇಲ್ಲ. ಕೆಲ ಕಾಲ ಮಂಡ್ಯದಲ್ಲಿದ್ದ ಇವರು ಈಗ ಕೆಲಸ ಹುಡುಕಿಕೊಂಡು ಬೆಂಗಳೂರಿಗೆ ಬಂದಿದ್ದಾರೆ.



ದೃಷ್ಟಿ ಪಡೆದುಕೊಂಡ ಮಗ ಧ್ರುವ ಕುಮಾರ್‌ನೊಂದಿಗೆ ತಾಯಿ ರೇಣುಕಾ.

ಚಿಕ್ಕ ವಯಸ್ಸಿನಲ್ಲೇ ಕಣ್ಣುಗಳ ಶಸ್ತ್ರಕ್ರಿಯೆ ಮಾಡಿಸಿದರೆ ದೃಷ್ಟಿ ಬರುವ ಸಾಧ್ಯತೆ ಕುರಿತು ಯಾರಿಂದಲೋ ಕೇಳಿ ತಿಳಿದುಕೊಂಡ ಈ ದಂಪತಿಗಳು ತಮ್ಮ ಕಂದಮ್ಮನನ್ನು ನಾರಾಯಣ ನೇತ್ರಾಲಯಕ್ಕೆ ಕರೆತಂದರು.

ಆ ಹಸುಳೆಯ ಪುಟ್ಟ ಕಣ್ಣುಗಳನ್ನು ಡಾ। ಅರುಣ್ ಸಂಪ್ರತಿ ಅವರು ಪರೀಕ್ಷಿಸಿ, ಪೊರೆ ಬೆಳೆದಿರುವುದನ್ನು ಗಮನಿಸಿದರು. ಶಸ್ತ್ರಚಿಕಿತ್ಸೆ ಮಾಡಿ ಅದನ್ನು ಸರಿಪಡಿಸಲು ಸುಮಾರು 15 ಸಾವಿರ ರೂ. ವೆಚ್ಚ ತಗಲುತ್ತದೆ. ಆದರೆ ಆ ದಂಪತಿಗಳು ಬಡವರಾದ್ದರಿಂದ ಉಚಿತವಾಗಿಯೇ ಶಸ್ತ್ರಚಿಕಿತ್ಸೆ ನಡೆಸಲು ಆಸ್ಪತ್ರೆಯ ಆಡಳಿತ ಮಂಡಳಿ ಹಾಗೂ ವೈದ್ಯಕೀಯ ನಿರ್ದೇಶಕ ಡಾ। ಕೆ. ಭುಜಂಗಶೆಟ್ಟಿ ಒಪ್ಪಿಕೊಂಡರು.

ಇಂದು ಸುಮಾರು ಮುಕ್ಕಾಲು ತಾಸಿನ ಶಸ್ತ್ರಚಿಕಿತ್ಸೆಯನ್ನು ಡಾ। ಸಂಪ್ರತಿ ಯಶಸ್ವಿಯಾಗಿ ನಡೆಸಿದರು. ದೊಡ್ಡವರ ನೇತ್ರ ಶಸ್ತ್ರಚಿಕಿತ್ಸೆಗಿಂತ ಪುಟ್ಟ ಮಕ್ಕಳ ನೇತ್ರ ಶಸ್ತ್ರಚಿಕಿತ್ಸೆ ಅತ್ಯಂತ ಕಷ್ಟದ ಮತ್ತು ಸವಾಲಿನ ಕೆಲಸ. ಶಸ್ತ್ರಕ್ರಿಯೆ ನಡೆಸಿದರೂ ಶೇ. 10ರಷ್ಟು ಮಕ್ಕಳಲ್ಲಿ ಮತ್ತೆ ಪೊರೆ ಬೆಳೆಯುತ್ತದೆ. ಈ ಮಗುವಿಗೆ ಹಾಗಾಗದಂತೆ ವೈದ್ಯರು 'ಪ್ರೈಮರಿ ಪೋಸ್ಟೀರಿಯರ್ ಕ್ಯಾಪ್ಸುಲೋಟಮಿ ಆ್ಯಂಡ್ ಆ್ಯಂಟೀರಿಯರ್ ವಿಟ್ರೆಕ್ಟಮಿ' ಎಂಬ ವಿಶೇಷ ತಂತ್ರಜ್ಞಾನ ಬಳಸಿದರು.

ದೊಡ್ಡವರ ಕಣ್ಣಿನ ಪೊರೆ ತೆಗೆದಾಗ ಇಂಟ್ರಾ ಆಕ್ಯುಲರ್ ಲೆನ್ಸ್ ಅಳವಡಿಸುವುದು ಸಹಜ. ಆದರೆ ಈ ಮಗುವಿನ ಕಣ್ಣು ಗುಡ್ಡೆ ಚಿಕ್ಕದಾಗಿದ್ದು 8 ವರ್ಷದವರೆಗೆ ಬೆಳೆಯಲಿರುವುದರಿಂದ ಲೆನ್ಸ್ ಅಳವಡಿಸಲಿಲ್ಲ. ಏಕೆಂದರೆ ಕಣ್ಣಿನ ಗಾತ್ರ ಮತ್ತು ಲೆನ್ಸ್‌ನ ಶಕ್ತಿಗೆ ಹೊಂದಾಣಿಕೆ ಆಗುವುದಿಲ್ಲ.

ಶಸ್ತ್ರಕ್ರಿಯೆ ನಂತರ ಮೊದಲ ದಿನ ಮಗು ಆರೋಗ್ಯವಾಗಿದೆ. ತನ್ನನ್ನು ಆಕರ್ಷಿಸುವ ವಸ್ತುಗಳನ್ನು ಹಿಡಿದುಕೊಳ್ಳಲು ಹೋಗುತ್ತದೆ. ಕಳೆದ ಒಂದು ವರ್ಷದಿಂದ ನೋಡದಿರುವ ಜಗತ್ತನ್ನು ಮಗು ನೋಡತೊಡಗಿದೆ. ಕುರುಡುತನದ ಹಿಂಸೆ ಅನುಭವಿಸಿ ಗೊತ್ತಿರುವ ಆ ದಂಪತಿಗಳಿಗೆ ತಮ್ಮ ಮಗುವಿಗೆ ದೃಷ್ಟಿ ಬಂದಿರುವುದನ್ನು 'ನೋಡಿ' ಸಂತೋಷವಾಗಿದೆ.